# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

*ಎಸ್.ಸಿ.* 257/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ವಿಜಯ್ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಗೋಪಿ | | **08.01.2025** |
| **ವಯಸ್ಸು** | ಃ 25 ವರ್ಷ | | |
| **ವೃತ್ತಿ** | ಃ ಆಟೋ ಚಾಲಕ | **ಪ್ರಾ.ಸಾ.** | ಃ 07 |
| **ವಾಸಸ್ಥಳ** | ಃ ಕನಕಗಿರಿ | **ಚಾ.ಸಾ.** | ಃ 04 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಕೋರ್ಟ್ ಮುಂದೆ ಇರುವ ಆರೋಪಿತರ ಪರಿಚಯ ಇಲ್ಲ. ಚಾ.ಸಾ-*1* ರಿಂದ *3* ರವರ ಪರಿಚಯ ಇಲ್ಲ. ಕೋರ್ಟ್ ಮುಂದೆ ಇರುವ ಆರೋಪಿತರು ಚಾ.ಸಾ-1 ರಿಂದ 3 ರವರ ಜೊತೆ ಗಲಾಟೆ ಮಾಡಿದ್ದನ್ನು ನಾನು ನೋಡಿಲ್ಲ. ಆರೋಪಿತರು ಚಾ.ಸಾ-1 ರಿಂದ 3 ರವರ ಜೊತೆ ಜಗಳ ಮಾಡಿ ಹಲ್ಲೆ ಮಾಡಿದ್ದನ್ನು ನೋಡಿದ್ದೆ ಎಂದು ಪೊಲೀಸರು ಮುಂದೆ ಹೇಳಿಕೆ ಕೊಟ್ಟಿಲ್ಲ.

*ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.*

*ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-*

*2.* ದಿಃ*04.10.2020* ರಂದು ರಾತ್ರಿ *12.30* ಗಂಟೆಗೆ ನಾನು ಜೆ.ಎಸ್.ಎಸ್ ಆಸ್ಪತ್ರೆ ಆಟೋ ಸ್ಟ್ಯಾಂಡ್ ನಲ್ಲಿ ಆಟೋ ನಿಲ್ಲಿಸಿಕೊಂಡು ನಿಂತಿದ್ದಾಗ ಕೋರ್ಟ್ ಮುಂದೆ ಇರುವ ಆರೋಪಿತರು ಜೆ.ಎಸ್.ಎಸ್ ಆಸ್ಪತ್ರೆ ಗೇಟ್ ಮುಂಭಾಗ ಎಂ.ಜಿ ರಸ್ತೆಯ ಹಂಪ್ಸ್ ಬಳಿ ತರಕಾರಿ ಮಾರುಕಟ್ಟೆ ಕಡೆಯಿಂದ

ಬರುತ್ತಿದ್ದ ಕಾರನ್ನು ಅಡ್ಡಗಟ್ಟಿ ನಿಲ್ಲಿಸಿ ಆ ಪೈಕಿ ಒಬ್ಬ ವ್ಯಕ್ತಿ ಕಾರು ಡ್ರೈವ್ ಮಾಡುತ್ತಿದ್ದ ವ್ಯಕ್ತಿಗೆ ಕೈಯಿಂದ ಹೊಡೆದಿದ್ದರು ಎಂದರೆ ಸರಿಯಲ್ಲ. ಆ ಕಾಲಕ್ಕೆ ಕಾರಿನಲ್ಲಿದ್ದ ವ್ಯಕ್ತಿಗಳು ಮತ್ತು ಕಾರ್ ಡ್ರೈವ್ ಮಾಡುತ್ತಿದ್ದ ಕೆಳಗೆ ಇಳಿದಾಗ ಅವರು ನನಗೆ ಗೊತ್ತಿರುವ ನವೀನ್ ಕುಮಾರ್, ಪವನ್ ಕುಮಾರ್ ಮತ್ತು ರಮೇಶ್ ಕುಮಾರ್ ಎಂದು ಗೊತ್ತಾಗಿತ್ತು ಮತ್ತು ನವೀನ್ ಕುಮಾರ್, ಪವನ್ ಕುಮಾರ್ ಯಾವ ಕಾರಣಕ್ಕೆ ರಮೇಶನಿಗೆ ಹೊಡೆದಿರಿ ಎಂದು ಕೇಳಿದಾಗ ಆರೋಪಿತರು ನಮ್ಮ ಹತ್ತಿರ ಜೋರಾಗಿ ಕಾರು ಓಡಿಸಿಕೊಂಡು ಗುದ್ದಿಸಲು ಬರುತ್ತೀರಾ ನಿಮ್ಮನ್ನು ಸಾಯಿಸಿಬಿಡುತ್ತೇವೆ ಎಂದು ಅಂಬರೀಷನು ರೇಜರ್ ಅನ್ನು ತೆಗೆದುಕೊಂಡು ನವೀನ್ ಕುಮಾರ್ ನ ಕುತ್ತಿಗೆಗೆ ಹೊಡೆದಿದ್ದ ಮತ್ತು ನವೀನ್ ಕುಮಾರ್ ತಪ್ಪಿಸಿಕೊಂಡಾಗ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ರೇಜರ್ ನಿಂದ ಮುಖಕ್ಕೆ ಹೊಡೆದಾಗ ಎಡ ಕಣ್ಣಿನ ಹತ್ತಿರ, ಎಡ ಭಾಗದ ತುಟಿ ಗಾಯವಾಗಿತ್ತು ಎಂದರೆ ಸರಿಯಲ್ಲ. ಸುರೇಶ್ ಸ್ವಾಮಿ ಆ ಮೂವರಿಗೂ ಕೈಯಿಂದ ಹೊಡೆದಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ನಾನು ಮತ್ತು ಇತರೆ ಆಟೋ ಚಾಲಕರು ಜಗಳ ಬಿಡಿಸಿದ್ದೆವು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಆಟೋವನ್ನು --------- ಗುರುತಿಸುತ್ತೇನೆ ಎಂದು ಹೇಳಿಕೆ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ-*6* ಎಂದು ಗುರುತಿಸಿದೆ. ಕೋರ್ಟ್ ಮುಂದೆ ಇರುವ ಆರೋಪಿತರೇ ಆ ದಿನ ಪವನ್ ಕುಮಾರ್ ಮತ್ತು ಇತರರಿಗೆ ಹಲ್ಲೆ ಮಾಡಿದ ವ್ಯಕ್ತಿಗಳು ಇರುತ್ತಾರೆ ಎಂದರೆ ಸರಿಯಲ್ಲ. ಈಗ ನಾನು ಆರೋಪಿತರ ಜೊತೆ ಶಾಮೀಲಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು : ಆರೋಪಿ ಪರ ವಕೀಲರವರಿಂದ:- ಇಲ್ಲ

ಮರು ವಿಚಾರಣೆ:- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು